# ‘ಗುತ್ತಿ’ಯ ಚಿತ್ತ ಸಿನಿಮಾದತ್ತ!

ಸುನಿಲ್ ಗ್ರೋವರ್ ಎಂದರೆ ಪಕ್ಕನೆ ಯಾರಿಗೂ ನೆನಪಾಗುವುದಿಲ್ಲ. ಅದೇ ಗುತ್ತಿ ಎಂದರೆ ಸಾಕು ಟಿ.ವಿ ಯ ಸಾಲು ಸಾಲು ಕಾಮಿಡಿ ಷೋಗಳು ನೆನಪಿಗೆ ಬರುತ್ತವೆ. ಈತನ ಪೂರ್ವಾಶ್ರಮದ ಬಗ್ಗೆ ಗೊತ್ತಿಲ್ಲದ ಎಷ್ಟೋ ಮಂದಿ ಟಿವಿ ಯ ಕಾಮಿಡಿ ಷೋನಲ್ಲಿ ಈತನ ಹೆಣ್ಣು ವೇಷ ‘ಗುತ್ತಿ’ಯನ್ನು ನೋಡಿ ಈತ ನಿಜಕ್ಕೂ ಹೆಣ್ಣೇ ಎಂದು ಭಾವಿಸಿದವರಿದ್ದಾರೆ. ಎಲ್ಲ ವಯೋಮಾನದ ಹೆಣ್ಣುಮಕ್ಕಳ ಪಾತ್ರವನ್ನೂ ಈತ ಯಾವ ಭಿಡೆಯೂ ಇಲ್ಲದೆ ನಿಸೂರಾಗಿ ನಿರ್ವಹಿಸಿದ್ದಾನೆ. ಪರಕಾಯ ಪ್ರವೇಶದ ಮಟ್ಟಿಗೆ ಈತನದ್ದು ಅಷ್ಟೊಂದು ತಾದಾತ್ಮ್ಯ. ಟಿವಿಯ ‘ಕಾಮಿಡಿ ನೈಟ್ಸ್ ವಿದ್ ಕಪಿಲ್ ಶರ್ಮಾ’ ಮತ್ತು ‘ದಿ ಕಪಿಲ್ ಶರ್ಮಾ ಷೋ’ ಈ ಗುತ್ತಿ ಗೆ ಪ್ರಚಂಡ ಜನಪ್ರಿಯತೆಯನ್ನು ತಂದುಕೊಟ್ಟಿದೆ.

ಜತೆಗೆ ಇತ್ತೀಚೆಗೆ ಈತ ನಿರ್ವಹಿಸುತ್ತಿರುವ ಡಾ. ಮಷೂರ್ ಗುಲಾಟಿ ಪಾತ್ರ. ಟಿವಿ ಯ ಕಾಮಿಡಿ ಷೋಗಳಿಗೆ ಜನಪ್ರಿಯತೆಯ ಹೊಸ ಎತ್ತರವನ್ನು ಸೃಷ್ಟಿಸಿದ ಪಾತ್ರವದು. ಸಾಕಷ್ಟು ಷೋಗಳಲ್ಲಿ ಸುನಿಲ್ ಗ್ರೋವರ್, ಸೂತ್ರಧಾರ ಕಪಿಲ್ ಶರ್ಮಾನನ್ನೂ ಮೀರಿಸಿ ಜನಪ್ರಿಯತೆ ಗಳಿಸಿದ್ದಾನೆ. ಕಪಿಲ್ ಶರ್ಮಾ ಷೋ ಗೆ ಮುನ್ನ ‘ಮ್ಯಾಡ್ ಇನ್ ಇಂಡಿಯಾ’ ಸರಣಿಯಲ್ಲಿ ಈತ ನಿರ್ವಹಿಸಿದ ಚುಟ್ಕಿ ಯ ಪಾತ್ರವೂ ಮನೆಮಾತಾಗಿತ್ತು.

ಟಿವಿ ಷೋಗಳಲ್ಲಿ ಮತ್ತು ಸ್ಟೇಜ್ ಕಾಮಿಡಿ ಷೋಗಳಲ್ಲಿ ಖ್ಯಾತಿಯ ಉತ್ತುಂಗಕ್ಕೇರಿರುವ ಸುನಿಲ್‌ಗೆ ಈಗ ಮತ್ತೆ ಸಿನಿಮಾಗಳಲ್ಲಿ ನಟಿಸುವ ಆಸೆ ಉಂಟಾಗಿದೆ. ಅದಕ್ಕೆ ತಕ್ಕಂತೆ ಎರಡು ಬಿಗ್ ಬಜೆಟ್ ಸಿನಿಮಾಗಳಲ್ಲಿ ಅವಕಾಶವೂ ಸಿಕ್ಕಿದೆ. ಸಲ್ಮಾನ್ ಖಾನ್ ನಾಯಕನಾಗಿರುವ ‘ಭರತ್’ ಚಿತ್ರದ ಪಾತ್ರದ ಬಗ್ಗೆ ಸುನಿಲ್ ಖುಷಿಯಿಂದ ಮಾತನಾಡುತ್ತಾನೆ. ರಾಜ್‌ಕುಮಾರ್ ರಾವ್ ಮತ್ತು ಶ್ರದ್ಧಾ ಕಪೂರ್ ಜತೆಗಿರುವ ಹಾರರ್ ಕಾಮಿಡಿ ಸಿನಿಮಾ ‘ಸ್ತ್ರೀ’ ಯಲ್ಲೂ ಸುನಿಲ್‌ಗೆ ಪ್ರಮುಖ ಪಾತ್ರ ಸಿಕ್ಕಿದೆ.

ಕುತೂಹಲದ ಸಂಗತಿಯೆಂದರೆ ಈತ ತನ್ನ ಚಿತ್ರಜೀವನವನ್ನು ಆರಂಭಿಸಿದ್ದು 20 ವರ್ಷಗಳ ಹಿಂದೆ 1998ರಲ್ಲಿ ‘ಪ್ಯಾರ್ ತೊ ಹೋನಾ ಹಿ ಥಾ’ ಎಂಬ ಚಿತ್ರದಲ್ಲಿ. ಆ ಸಿನಿಮಾ ಬಾಲಿವುಡ್‌ನಲ್ಲಿ ‘ಸೂಪರ್‌ಹಿಟ್’ ಆಯಿತು. ಆಗ ಪಂಜಾಬ್ ಯೂನಿವರ್ಸಿಟಿಯ ಡ್ರಾಮಾ ಸ್ಕೂಲ್‌ನಲ್ಲಿದ್ದ ಸುನಿಲ್ ಗ್ರೋವರ್‌ನನ್ನು, ನಿರ್ದೇಶಕ ಅನೀಸ್ ಬಾಜ್ಮಿ ಮೊದಲು ಕರೆಸಿಕೊಂಡದ್ದು ಕೇವಲ ಎರಡು ದೃಶ್ಯಗಳಲ್ಲಿ ಇದ್ದ ಕ್ಷೌರಿಕನ ಪಾತ್ರಕ್ಕೆ. ನಾಯಕ ನಟ ಅಜಯ್ ದೇವಗನ್‌ನ ಮೀಸೆಯನ್ನು ಕಣ್ತಪ್ಪಿನಿಂದ ಅರ್ಧ ಕತ್ತರಿಸುವ ದೃಶ್ಯವದು. ಸುನಿಲ್‌ನನ್ನು ಭೇಟಿಯಾಗಿ ಮಾತನಾಡಿಸಿದ ಬಳಿಕ ನಿರ್ದೇಶಕ ಬಾಜ್ಮಿ ಸಾಕಷ್ಟು ಡೈಲಾಗ್‌ಗಳನ್ನು ಬದಲಾಯಿಸಿ ಉದ್ದದ ಪಾತ್ರವನ್ನೇ ನೀಡಿದ. ಆ ಸಿನಿಮಾದಲ್ಲಿ ಸುನಿಲ್‌ನ ಡೈಲಾಗ್‌ಗಳು ಸೂಪರ್‌ಹಿಟ್ ಆದವು. ಈ ಜನಪ್ರಿಯತೆಯನ್ನು ಕಂಡ ಈತನ ಅಪ್ಪ, ಮಗನನ್ನು ರೈಲ್ವೆ ಇಲಾಖೆಯ ಕ್ಲರ್ಕ್ ಕೆಲಸಕ್ಕೆ ಸೇರೆಂದು ದುಂಬಾಲು ಬೀಳುತ್ತಿದ್ದುದನ್ನು ನಿಲ್ಲಿಸಿದ. ಆಗಿನ್ನೂ ಸುನಿಲ್‌ಗೆ 20ರ ಹರೆಯ. ತಮಾಷೆಯ ಸಂಗತಿಯೆಂದರೆ ಆ ಸಿನಿಮಾದ ಟೈಟಲ್ ಕಾರ್ಡ್‌ನಲ್ಲಿ ಆತನ ಹೆಸರು (ಬಾಲ್ಯದಲ್ಲಿ ಇದ್ದಂತೆ) ಸುರಿಂದರ್ ಗ್ರೋವರ್ ಎಂದೇ ನಮೂದಾಗಿತ್ತು. ಈ ಹೆಸರೇಕೋ ಅಷ್ಟು ಸರಿಯಿಲ್ಲ ಎಂದನ್ನಿಸಿ ಆತ ಸುರಿಂದರ್ ಕಿತ್ತುಹಾಕಿ ಸುನಿಲ್ ಎಂದು ಬದಲಾಯಿಸಿಕೊಂಡ.

ಚಂಡೀಗಢದ ಬಳಿಯ ಪುಟ್ಟ ಹಳ್ಳಿಯೊಂದರಿಂದ ಬಂದ ಸುನಿಲ್ (ಬರ್ತ್‌ಡೇ 3.8.1977) ಆ ಬಳಿಕ ಸಿನಿಮಾದಲ್ಲಿ ದೊಡ್ಡ ಪಾತ್ರಗಳನ್ನು ಗಳಿಸಲಾಗಲಿಲ್ಲ. ಸಿನಿಮಾ ಜೀವನವನ್ನು ಅರಸಿ ಮುಂಬೈಗೆ ಬಂದ ಸುನಿಲ್‌ಗೆ ಗೆಳೆಯನೊಬ್ಬ ತನ್ನ ಕೋಣೆಯಲ್ಲಿ ಆಶ್ರಯ ಕೊಟ್ಟ. ಆದರೆ ಇಬ್ಬರಿಗೂ ಈತನೇ ಅಡುಗೆ ಮಾಡಬೇಕಿತ್ತು. ಜತೆಗೆ ಬಟ್ಟೆ ಒಗೆಯುವ ಕೆಲಸವೂ! ಅದೇ ಸಮಯದಲ್ಲಿ ‘ದಿ ಲೆಜೆಂಡ್ ಆಫ್ ಭಗತ್‌ಸಿಂಗ್’ ಸಿನಿಮಾದ ಪಾತ್ರ ಸಿಕ್ಕಿತು. ಬಟ್ಟೆ ಒಗೆಯುವ ಕೆಲಸ ಮೂರು ತಿಂಗಳ ಮಟ್ಟಿಗೆ ತಪ್ಪಿಹೋಗುತ್ತದೆಂಬ ಖುಷಿಯಲ್ಲೇ ಆ ಪಾತ್ರ ನಿರ್ವಹಿಸಿದ ಸುನಿಲ್. ಸಿನಿಮಾ ಸೆಟ್‌ನಲ್ಲಿ ನಿರ್ದೇಶಕ ರಾಜ್‌ಕುಮಾರ್ ಸಂತೋಷಿ ಸಹಿತ ಎಲ್ಲರನ್ನೂ ಮಿಮಿಕ್ರಿ ಮಾಡುತ್ತಾ ಸುನಿಲ್ ಉದ್ಯಮದ ಗಮನ ಸೆಳೆದ. ಅದೇ ಆತನನ್ನು ಧ್ವನಿದಾನ ಕಲಾವಿದನನ್ನಾಗಿ ರೂಪಿಸಿತು. ಎಷ್ಟೊಂದು ಬೇಡಿಕೆ ಬಂತೆಂದರೆ, ದಿನಕ್ಕೆ ಐದಾರು ಸಿನಿಮಾಗಳಿಗೆ ಕಂಠದಾನ ನೀಡತೊಡಗಿದ. ಸುಮಾರು 150ಕ್ಕೂ ಹೆಚ್ಚು ನಟ, ನಟಿಯರ ಧ್ವನಿಗಳನ್ನು ಅನುಕರಿಸುತ್ತಿದ್ದ ಈತನ ಪ್ರತಿಭೆ ಕಂಡು ಬಾಲಿವುಡ್ ಆಗಲೇ ಬೆರಗಾಗಿತ್ತು.

ಸಂತೋಷಕ್ಕೆಂದು ನಾಟಕಗಳಲ್ಲಿ ನಟಿಸಿದ. ಅಲ್ಲಿಂದ ಪಯಣ ಟಿವಿ ಯತ್ತ ತಿರುಗಿತು. ಟಿವಿಯಲ್ಲಿ ಈತನ ಕಾಮಿಡಿ ಪಾತ್ರಗಳು ಮಿಂಚಿದ್ದೇ ತಡ, ಬೇಡಿಕೆ ಏಕ್‌ದಂ ಮುಗಿಲಿಗೇರಿತು. ಈಗ ಸುನಿಲ್ ಗ್ರೋವರ್‌ಗೆ ಟ್ವಿಟ್ಟರ್‌ನಲ್ಲಿ 50 ಲಕ್ಷ ಅನುಯಾಯಿಗಳಿದ್ದಾರೆ! ಈತನ ಸ್ಟೇಜ್ ಷೋಗಳನ್ನು ಜನ ಮುಗಿಬಿದ್ದು ನೋಡುತ್ತಾರೆ. ‘ಟ್ವಿಟ್ಟರ್‌ನಲ್ಲಿ ಎಷ್ಟೇ ಲೈಕ್ ಬರಲಿ, ವೇದಿಕೆಯ ಮೇಲೆ ಸಿಗುವ ಚಪ್ಪಾಳೆಗೆ ಮಿಗಿಲಾದದ್ದು ಯಾವುದೂ ಇಲ್ಲ’ ಎನ್ನುವುದು ಈತನ ಸ್ಪಷ್ಟನುಡಿ.

ಈ ಮಧ್ಯೆ ಪಂಜಾಬ್‌ನಿಂದ ಆಕ್ಲಂಡ್‌ವರೆಗೆ ಜಗತ್ತಿನ ವಿವಿಧ ದೇಶಗಳಲ್ಲಿ ಕಾಮಿಡಿ ಷೋ ನೀಡುವ ಈತನ ವಿಶ್ವಪರ್ಯಟಣೆಯ ಯೋಜನೆ ಕೂಡಾ ಸಿದ್ಧವಾಗಿದೆ. ಬಹುಶಃ ವರ್ಷಾಂತ್ಯಕ್ಕೆ ಪ್ರವಾಸ ಶುರುವಾಗಲಿದೆ. ಸದ್ಯಕ್ಕಂತೂ ಈತ ಭಾರತದ ಕಿರುತೆರೆಯ ಸೂಪರ್‌ಸ್ಟಾರ್ ಕಾಮಿಡಿಯನ್.



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65